ಸ್ಪಿಂದಿಗಾಗಿ ವಸತಿ ಗೃಹಗಳನ್ನು ಕಟ್ಟಿ ಅದರಲ್ಲಿ ಈಗಲೇ ಸಿಬ್ಬಂದಿ ವಾಸ ಮಾಡುತ್ತಿದ್ದಾರೆ. ಜೈಲು ಕಟ್ಟಡವನ್ನು ಅಲ್ಲಿ ಕಟ್ಟುತ್ತಿಲ್ಲ. ಕಾಂಪೌಂಡ್ ಮಾತ್ರ ಹಾಕುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಹೇಳತಕ್ಕಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ಮತ್ತೆ ಸನ್ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಪುರಸಭೆಯವರು ಬದಲಿ ನಿವೇಶನ ಅಂದರೆ ೨ ಎಕರೆ ಜಮೀನನ್ನು ಜೈಲು ಕಟ್ಟಡವನ್ನು ಕಟ್ಟಲು ಕೊಡುವುದಕ್ಕೆ ತಯಾರಾಗಿದ್ದೇವೆಂಬುದರ ಬಗ್ಗೆ ಇದುವರೆಗೆ ಯಾವುದೇ ಮಾಹಿತಿ ಬರವಣಿಗೆಯಂ ಮೂಲಕ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ವೀರಣ್ಣ–ಜೈಲು ಕಟ್ಟಡವನ್ನು ಈಗ ಕಟ್ಟದೆ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ ಒತ್ತುವರಿಯನ್ನು ತೆಡೆಗಟ್ಟುವುದಕ್ಕೋಸ್ಕರ ಕಾಂಪಾಂಡನ್ನು ಮಾತ್ರ ಹಾಕುತ್ತಿದ್ದೇವೆ.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ–ನಮ್ಮ ಅಫಜಲ್‌ಪುರ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇದ್ದು ಕೊಳವೆ ಬಾವಿಗಳನ್ನು ತೋಡಿದಾಗ್ಯೂ ಕೂಡ ನೀರು ಬಾರದೆ ಇರುವುದರಿಂದ ನದಿಯ ಬಳಿ ಕೊಳಲ ಬಾವಿಗಳನ್ನು ಹಾಕಿ ನೀರು ಸರಬರಾಜು ಮಾಡಲಂ ಸೂಕ್ತ ಕ್ರಮ ಕೈಗೊಂಡು ಜನಗಳಿಗೆ ಕುಡಿಯುವ ನೀರಿನ ಬವಣೆಯನ್ನು ತಪ್ಪಿಸುತ್ತೀರಾ?

ಶ್ರೀ ಅಬ್ದುಲ್ ನಜೀರ್ ಸಾಬ್–ಈಗ ಕೆಲವು ಹಳ್ಳಿಗಳಲ್ಲಿ ಮೂರು ಬಾವಿಗಳಿವೆ, ನೀರು ಬರುತ್ತಿದೆ; ಕೈಪಂಪುಗಳನ್ನು ಜೋಡಿಸಲಾಗಿದೆ. ಆರ್ಜೆನಾಂಗ ತಾಂಡದಲ್ಲಿ ಮೂರು ಕೊಳವೆ ಬಾವಿಗಳನ್ನು ಹಾಕಿದ್ದು ನೀರು ಕೆಳಗಡೆ ಹೋಗಿದೆ. ಅವುಗಳನ್ನು ಇನ್ನಷ್ಟು ಆಳವಡಿಸಿ ಪೈಪುಗಳನ್ನು ಹಾಕಿ ನೀರು ಬರುವ ವ್ಯವಸ್ಥೆ ಮಾಡಲಾಗುವುದು, ಇಲ್ಲದಿದ್ದರೆ ಭೂಗರ್ಭವನ್ನು ತಪ್ಪಾಸಣೆ ಮಾಡಿ ನೀರು ಕೊಡುವ ವ್ಯವಸ್ಥೆ ಮಾಡಲಾಗುವುದು. ಸಾದನೂರು ಹಳ್ಳಿಯಲ್ಲಿ ಮೂರು ಕೊಳವೆ ಬಾವಿಗಳಿವೆ. ಅದರಲ್ಲಿ ಒಂದಕ್ಕೆ ಆಲ್ಲಿನ ಜನರು ಕಲ್ಲು, ಮಣ್ಣು ತುಂಬಿರುವುದರಿಂದ ನೀರು ಸಿಗುತ್ತಿಲ್ಲ. ಇನ್ನೊಂದು ಸಿಲ್ಪ್ ಅಪ್ ಆಗಿದೆ. ಮತ್ತೊಂದರ ನೀರು ಸಾಕಾಗುತ್ತಿಲ್ಲ. ಸಿಲ್ಪ್ ಆಪ್ ಅನ್ನು ಬೋರ್ ಮಾಡಿಸಿ ನೀರು ಕೊಡತಕ್ಕ ವ್ಯವಸ್ಥೆ ಮಾಡುತ್ತೇವೆ. ಇನ್ನು ಬೆಳಗಿರ್ ಗ್ರಾಮದಲ್ಲಿ ನೀರು ಸರಬರಾಜಿನ ವ್ಯವಸ್ಥೆ ಇದೆ. ಆದರೆಅಲ್ಲಿ ಬರತಕ್ಕ ನೀರು ಸಾಲುತ್ತಿಲ್ಲ. ಆದುದರಿಂದ ಇನ್ನೊಂದು ನೀರು ಸರಬರಾಜಿನ ಮೂಲವನ್ನು ಹುಡುಕುವ ಕಾರ್ಯ ನಡೆಯುತ್ತಿದೆ. ತೆಲ್ಲೂರಿನಲ್ಲಿ ಎರಡು ಬಾವಿಗಳನ್ನು ತೋಡಿಸಿ ಎರಡೂ ಬಾವಿಗಳು ಒಣಗಿ ಹೋಗಿವೆ. ಅದಕ್ಕೋಸ್ಕರ ಓಪನ್ ವೆಲ್ ಮಾಡಿಸಿದ್ದೇವೆ. ಇಷ್ಟೇ ಅಲ್ಲದೆ ಒಂದು ಆದೇಶವನ್ನು ಕೂಡ ಕಳುಹಿಸಿ ಅಧಿಕಾರಿಗಳಂ ಕೂಡಲೇ ಹೋಗಿ ನೋಡಿ ಬೋರ ವೆಲ್‌ಗಳಿದ್ದರೂ ನೀರು ಸಾಕಾಗದೆ ಇದ್ದರೆ ಅಂಥ ಕಡೆ ನದಿ ತೀರದಿಂದ ನೀರನ್ನು ತರತಕ್ಕ ವ್ಯವಸ್ಥೆ ಮಾಡಿ ಎಂದು ಹೇಳಿದ್ದೇನೆ.

ಶ್ರೀ ಶರಣಬಸಪ್ಪ ಮಾಲಿ ಪಾಟೀಲ್–ನಮ್ಮ ಆಳಂದ ತಾಲೂಕಿಗೆ ಕುಡಿಯುವ ನೀರಿನ ತೊಂದರೆ ಇದೆ. ಅದಕ್ಕೋಸ್ಕರ ಅಲ್ಲಿ ಪರಿಯತಕ್ಕ ಹೊನ್ನಾಳಿ ಟ್ಯಾಂಕಿನಿಂದ ಪೈಪ್‌ಲೈನ್ ಹಾಕಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಅಲ್ಲಿ ಕಳೆದ ಎರಡು ವರ್ಷಗಳಿಂದ ನೀರಿನ ತೊಂದರೆ ಬಹಳ ಇದೆ. ಆಳಂದದಲ್ಲಿರತಕ್ಕ ಮುನಿಸಿಪಾಲಿಟಿ ಸದಸ್ಯರು ನೀರಿನ ಸಮಸ್ಯೆ ಬಗ್ಗೆ ಪಂಪ್ಕರ ಕೂರುತ್ತೆವೆಂದು ಪತ್ರ ಬರೆದಿದ್ದಾರೆ. ಅದಕೋಸ್ಕರ ತಾವು ಕೂಡಲೇ ಅಲ್ಲಿ ನೀರಿನ ವ್ಯವಸ್ಥೆ ಮಾಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಆ ವಿಚಾರವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಪಂಲ್ಲಾರಿಗೌಡ ಪಾಟೀಲ್–ನಮ್ಮ ಸಂಕೇಶ್ವರ ಮತ್ತು ಹುಕ್ಕೇರಿ ಪಟ್ಟಣಗಳಲ್ಲಿ ಬಹಳಷ್ಟು ಕುಡಿಯುವ ನೀರಿನ ಕೊರತೆ ಇದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಯೋಜನೆಯನ್ನು ಕಳುಹಿಸಿದ್ದೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇಲ್ಲಿ ರಾಜಕೀಯ ಮಾಡಿದ್ದಾರೆಂದು ಆರೋಪ ಬಂದಿದೆ. ಅದರೂ ತಾವು ರಾಜಕೀಯವನ್ನು ಗಣನೆಗೆ ತೆಗೆದುಕೊಳ್ಳದೆ ಇದು ಸಾರ್ವಜನಿಕರ ಕೆಲಸವೆಂದು ಒಂದು ಕೋಟಿ ರೂಪಾಯಿಗಳನ್ನು ಮಂಜೂರ್ಮಾಡಿ ಕೆಲಸ ಮಾಡಿಸುತ್ತೀರಾ? ಇದರ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿಕೆ ಕೊಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ–ಅಲ್ಲಿ–ರಾಜಕೀಯ ನಡೆದಿದೆ ಎಂಬುದನ್ನು ಆತ್ಮ ಮುಟ್ಟಿಕೊಂಡು ಹೇಳಲಿ ರಾಜಕೀಯ ಮಾಡಿಸುವುದು ಇದ್ದರೆ ಊರಿಗೆ ಹೋದಾಗ ಅನೌನ್ಸ್ ಮಾಡುತ್ತಿರಲಿಲ್ಲ.